# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಾ: ಜಿ.ಬಸವರಾಜ ಸಹಾಯಕ ಕೃಷಿ ನಿರ್ದೇಶಕರು, ಇವರ ವಿರುದ್ಧದ ಶಿಸ್ತು ಕ್ರಮ

**ಓದಲಾಗಿದೆ:-**

1) ಹೆಚ್ಚುವರಿ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಎಲ್-19/ಸಿಆರ್2/2010, ಹಾವೇರಿ.ದಿನಾಂಕ: 04-11-2010
2) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 44 ಕೃಪವಿ 2010, ದಿನಾಂಕ: 12-07-2010.
3) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 44 ಕೃಪವಿ 2010, ದಿನಾಂಕ: 29-07-2011
4) Deputy Registrar Enquires-1, Karnataka Lokayukta, Bangalore , D.O.ltr. No. Compt/Uplok/BGM-316/2010/DRE-1, Dated 22-08-2011.

**ಪ್ರಸ್ತಾವನೆ:-**

ಹೆಚ್ಚುವರಿ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಪತ್ರದಲ್ಲಿ ಡಾ: ಜಿ.ಬಸವರಾಜ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಇವರು ಶ್ರೀ ರಾಜಶೇಖರ್, ಹನುಮಂತಪ್ಪ ಬಳ್ಳಾರಿ ಡೊಂಬರ ಮತ್ತೂರು ನಿವಾಸಿ, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ, ಎಂಬುವವರಿಂದ ಅಕ್ರಮ ಸಂಭಾವನೆ ಪಡೆಯುತ್ತಿರುವಾಗ ಸಿಕ್ಕಿ ಬಿದ್ದಿರುತ್ತಾರೆಂದು, ನೀಡಿದ ವರದಿಯಂತೆ ಸದರಿ ಅಧಿಕಾರಿಯವರನ್ನು ಉಲ್ಲೇಖ-2ರ ಸರ್ಕಾರಿ ಆದೇಶದಲ್ಲಿ ಅವರ ಮೇಲಿನ ಲೋಕಾಯುಕ್ತದ ಕ್ರಿಮಿನಲ್ ಮೊಕದ್ದಮೆಯನ್ನು ಬಾಕಿಯಿರಿಸಿ, ಸೇವೆಯಿಂದ ಅಮಾನತ್ತಗೊಳಿಸಲಾಗಿತ್ತು ಮತ್ತು ಉಲ್ಲೇಖ-3ರ ದಿನಾಂಕ: 29-07-2011ರ ಸರ್ಕಾರದ ಆದೇಶದಲ್ಲಿ ಅವರ ಅಮಾನತ್ತು ಆದೇಶವನ್ನು ಪುನರ್ ಪರಿಶೀಲಿಸಿದ ಸರ್ಕಾರ, ಅವರ ಮೇಲಿನ ಲೋಕಾಯುಕ್ತ ಪ್ರಕರಣವನ್ನು ಬಾಕಿ ಇರಿಸಿ, ಸಹಾಯಕ ಕೃಷಿ ನಿರ್ದೇಶಕರು, ಮುಂಡರಗಿ ಇಲ್ಲಿಗೆ ನೇಮಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರ.ಸಂ.(4)ರಲ್ಲಿ ಓದಲಾದ ದಿನಾಂಕ: 22-08-2011ರ ಪತ್ರದಲ್ಲಿ Deputy Registrar Enquires-1, Karnataka Lokayukta, Bangalore ಇವರು, ಈ ಪ್ರಕರಣದಲ್ಲಿಯ ಫಿರ್ಯಾದಿದಾರರು, ಹಾವೇರಿಯ ಗುತ್ತಲ್ ರಸ್ತೆಯಲ್ಲಿ ಕೃಷಿ ಪರಿಕರಗಳನ್ನು ಮಾರಲು ಲೈಸನ್ಸ ನೀಡುವ ಸಲುವಾಗಿ, ಸಹಾಯಕ ಕೃಷಿ ನಿರ್ದೇಶಕರು, ಹಾವೇರಿರವರಿಗೆ ದಿನಾಂಕ: 01-06-2010ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ಕ್ರಮ ವಹಿಸಲು ಡಾ: ಜಿ. ಬಸವರಾಜ, ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ, ರೂ. 10,000/- ಸಂಭಾವನೆ ನೀಡುವಂತೆ ಕೋರಿರುತ್ತಾರೆಂದು ಮತ್ತು ಅಂತಿಮವಾಗಿ ರೂ. 8,000/-ಗಳಿಗೆ ಚೌಕಾಸಿ ಮಾಡಿ ಹಣ ನೀಡುವಂತೆ ಕೋರಿದ್ದು, ಸದರಿ ಹಣವನ್ನು ಹಣವನ್ನು

ನೀಡಲು ಫಿರ್ಯಾದಿದಾರರಿಗೆ ಇಷ್ಟವಿಲ್ಲದ್ದರಿಂದ, ಡೆಪ್ಯುಟಿಸುಪರಿಂಟೆಂಡೆಂಟ್ ಆಫ್ ಪೋಲೀಸ ಕರ್ನಾಟಕ ಲೋಕಾಯುಕ್ತ ಹಾವೇರಿ ಇಲ್ಲಿಗೆ ದೂರು ನೀಡಿದ್ದು, ಅದರಂತೆ ಸದರಿ ಪ್ರಕರಣವನ್ನು ಹಾವೇರಿ ಲೋಕಾಯುಕ್ತ ಪೋಲೀಸ ಠಾಣೆಯಲ್ಲಿ ಗುನ್ನೆ ಸಂಖ್ಯೆ: 2/2010ರಲ್ಲಿ ಲಂಚ ನಿರ್ಮೂಲನಾ ಕಾಯ್ದೆ 7 ಮತ್ತು 13(1) ಡಿ r/w section 13(2) ಪ್ರಕರಣ ದಾಖಲು ಮಾಡಿಕೊಂಡಿದ್ದು, ತನಿಖೆ ನಡೆಯುತ್ತಿದೆಂದು ವರದಿ ಮಾಡಿರುತ್ತಾರೆ, ಮತ್ತು ಡಾ: ಜಿ. ಬಸವರಾಜು, ಸಹಾಯಕ ಕೃಷಿ ನಿರ್ದೇಶಕರು, ಇವರು ಸರ್ಕಾರಿ ಅಧಿಕಾರಿಯಾಗಿದ್ದು, ಸಾರ್ವಜನಿಕರ ಕೆಲಸ ಮಾಡಲು, ಅಕ್ರಮವಾದ ಸಂಭಾವನೆ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದು, ಕರ್ನಾಟಕ ನಾಗರೀಕರ ಸೇವೆ (ನಡತೆ) ನಿಯಮಾವಳಿ 1966ರಂತೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆ, ಆದ್ದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಉದ್ದೇಶಿಸಿ, ಆರೋಪಿತ ಅಧಿಕಾರಿಯವರಿಗೆ ಸೂಚನಾ ಪತ್ರ ಜಾರಿ ಮಾಡಲಾಗಿದ್ದು, ಅದಕ್ಕೆ ಅವರು ನೀಡಿದ ಹೇಳಿಕೆ ತೃಪ್ತಿಕರವಾಗಿರದಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರಡಿ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14(ಎ) ರನ್ವಯ ತಮಗೆ ಒಪ್ಪಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ ಕರ್ನಾಟಕರವರ ಕೋರಿಕೆಯಂತೆ ಡಾ: ಜಿ. ಬಸವರಾಜ, ಸಹಾಯಕ ಕೃಷಿ ನಿರ್ದೇಶಕರವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ಸೆಕ್ಷನ್ ನಿಯಮ 3(1)ರ ಪ್ರಕಾರ ತಪ್ಪೆಸಗಿದ್ದಾರೆಂಬುದು ಮೇಲ್ನೋಟಕ್ಕೆ ((prima-facie) ಕಂಡು ಬಂದಿದ್ದರಿಂದ, ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲು ಪ್ರಕರಣವನ್ನು ಅದೇ ನಿಯಮಾವಳಿ 14-ಎ ಪ್ರಕಾರ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 44 ಕೃಪವಿ 2010.**

**ಬೆಂಗಳೂರು, ದಿನಾಂಕ: 02-12-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಡಾ: ಜಿ.ಬಸವರಾಜ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ, ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಮುಂಡರಗಿ, ಗದಗ ಜಿಲ್ಲೆ ಇವರು ಫಿರ್ಯಾಧಿದಾರರಾದ ಶ್ರೀ ರಾಜಶೇಖರ್ ಹನುಮಂತಪ್ಪ ಬಳ್ಳಾರಿ, ಎಂಬುವವರಿಂದ ಅಕ್ರಮ ಸಂಭಾವನೆ ಪಡೆಯುತ್ತಿರುವಾಗ ಸಿಕ್ಕಿ ಬಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕರ್ನಾಟಕ

ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 11ರಡಿ ವಿಚಾರಣಾ ಕ್ರಮವನ್ನು ಆಯೋಜಿಸಲು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಪ್ರಕರಣವನ್ನು ಕರ್ನಾಟಕ ಉಪ-ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

2/12/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ.
ಕೃಷಿ ಇಲಾಖೆ.
2/12

ಇವರಿಗೆ:-

1) ಮಹಾಲೇಖಪಾಲರು. (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ. ಬೆಂಗಳೂರು.
2) ಮಾನ್ಯ ಉಪ ಲೋಕಾಯುಕ್ತರು-1. ಕರ್ನಾಟಕ ಲೋಕಾಯುಕ್ತ. ಬೆಂಗಳೂರು.
3) ಆಯುಕ್ತರು. ಕೃಷಿ ಇಲಾಖೆ. ಶೇಷಾದ್ರಿ ರಸ್ತೆ. ಬೆಂಗಳೂರು.
4) ಜಂಟಿ ಕೃಷಿ ನಿರ್ದೇಶಕರು. ಗದಗ. ಗದಗ ಜಿಲ್ಲೆ/ ಹಾವೇರಿ ಹಾವೇರಿ ಜಿಲ್ಲೆ.
5) ಸಹಾಯಕ ಕೃಷಿ ನಿರ್ದೇಶಕರು. ಮುಂಡರಗಿ. ಗದಗ ಜಿಲ್ಲೆ.
6) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
7) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನ ಸೌಧ. ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಕೃಷಿ ಇಲಾಖೆ. ಬೆಂಗಳೂರು.
9) ಸರ್ಕಾರದ ಜಂಟಿ ಕಾರ್ಯದರ್ಶಿ. ಕೃಷಿ ಇಲಾಖೆ. ಅವರ ಆಪ್ತ ಸಹಾಯಕರಿಗೆ.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.